# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1017 (1152)

ಸದಸ್ಯರ ಹೆಸರು : ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು)

ಉತ್ತರಿಸಬೇಕಾದ ದಿನಾಂಕ : 07.03.2022

ಉತ್ತರಿಸುವವರು : ಅರಣ್ಯ ಹಾಗೂ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಶ್ರೀಗಂಧ ಬೆಳೆಯುತ್ತಿರುವ ಪ್ರದೇಶಗಳೆಷ್ಟು; ಶ್ರೀಗಂಧ ಬೆಳೆಯಲು ಇಲಾಖೆಯಿಂದ ನೀಡುತ್ತಿರುವ ಉತ್ತೇಜನಗಳೇನು; | ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ 2,618 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ ಶ್ರೀಗಂಧದ ಗಿಡಗಳನ್ನು ಬೆಳಸಿ ಪೋಷಣೆ ಮಾಡಲಾಗುತ್ತಿದೆ. ಅಲ್ಲದೇ, ರೈತರಿಗೆ ರಿಯಾಯಿತಿ ದರದಲ್ಲಿ ಶ್ರೀಗಂಧದ ಸಸಿಗಳನ್ನು ನೀಡಲಾಗುತ್ತಿದೆ. ಜೊತೆಗೆ, ಇಲಾಖೆಯಲ್ಲಿ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ ನೋಂದಾಯಿತ ರೈತರಿಗೆ ಬದುಕುಳಿದ ಪ್ರತಿ ಸಸಿಗೆ ಮೂರು ವರ್ಷಗಳಿಗೆ ಒಟ್ಟು ರೂ.125/-ರಂತೆ ಪ್ರೋತ್ಸಾಹ ಧನವನ್ನು ನೀಡಿ ಉತ್ತೇಜನ ನೀಡಲಾಗುತ್ತಿದೆ. |
| ಆ) | ಶ್ರೀಗಂಧದ ಮರವನ್ನು ಮಾರಾಟ ಮಾಡಲು ಇರುವ ನಿಯಮಗಳೇನು; ಇದಕ್ಕೆ ನಿಗದಿಪಡಿಸಿರುವ ದರಗಳೇನು; | ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್ ಇಇ 16 ಎಫ್ ಎಸ್ ಡಬ್ಲ್ಯೂ 2001, ದಿನಾಂಕ 05.09.2002ರಲ್ಲಿ ಕರ್ನಾಟಕ ಅರಣ್ಯ ನಿಯಮಾವಳಿ, 1969ರ ನಿಯಮ 108(5), 108(6)ರನ್ವಯ ಶ್ರೀಗಂಧ ಮರಗಳ ಮಾಲೀಕರು ಶ್ರೀಗಂಧ ಮರಗಳನ್ನು ಮೈಸೂರು, ಶಿವಮೊಗ್ಗ, ಮತ್ತು ಧಾರವಾಡ ಸರ್ಕಾರಿ ಶ್ರೀಗಂಧ ಕೋಠಿಗಳಿಗೆ ನೀಡಬಹುದಾಗಿರುತ್ತದೆ.<br><br>ತದನಂತರ, ಶ್ರೀಗಂಧ ಮರವನ್ನು ವಿವಿಧ ವರ್ಗಗಳಾಗಿ ಪರಿವರ್ತಿಸಿ, ಪ್ರತಿಯೊಂದು ವರ್ಗಕ್ಕೆ ಸರ್ಕಾರವು ನಿಗದಿಪಡಿಸಿರುವ ದರಗಳನ್ವಯ ಅದರ ಮೌಲ್ಯವನ್ನು ನಿಗದಿಪಡಿಸಲಾಗುತ್ತಿದೆ. ಹೀಗೆ ನಿಗದಿಪಡಿಸಿದ ವಿವಿಧ ವರ್ಗಗಳ ಶ್ರೀಗಂಧದ ಒಟ್ಟು ಮೌಲ್ಯದಲ್ಲಿ, 10% ಮೇಲ್ವಿಚಾರಣೆ ವೆಚ್ಚ, ಶ್ರೀಗಂಧ ಕೋಠಿಯಲ್ಲಿ ಪರಿವರ್ತನೆಗೆ ತಗಲುವ ವೆಚ್ಚ ಮತ್ತು ಒಂದು ವೇಳೆ ಇಲಾಖಾವತಿಯಿಂದ ಶ್ರೀಗಂಧ ಮರಗಳನ್ನು ರೈತರ ಜಮೀನಿನಿಂದ ಡಿಪೋಗೆ ಸಾಗಾಣಿಕೆ ಮಾಡಿದಲ್ಲಿ ಅದಕ್ಕೆ ತಗಲುವ ಸಾಗಾಣಿಕೆ ವೆಚ್ಚವನ್ನು ಕಡಿತಗೊಳಿಸಿ, ಉಳಿದ ಮೊತ್ತವನ್ನು ಶ್ರೀಗಂಧ ಮರಗಳ ಮಾಲೀಕರಿಗೆ ಪಾವತಿಸಲಾಗುತ್ತಿದೆ.<br><br>ಮುಂದುವರೆದು, ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್‌ಇಇ 31 ಎಫ್‌ಎಸ್‌ಡಬ್ಲ್ಯೂ 2008, ದಿನಾಂಕ 11.07.2008ರನ್ವಯ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ ಮತ್ತು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಸಂಸ್ಥೆಗಳಿಗೂ ಸಹ ಮಾರಾಟ ಮಾಡಬಹುದಾಗಿರುತ್ತದೆ. |

**ಇ)** ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಡ್ ಲಿಮಿಟೆಡ್ ನಿಂದ ಎಷ್ಟು ಪ್ರಮಾಣದ ಶ್ರೀಗಂಧದ ಎಣ್ಣೆಯನ್ನು ಖರೀದಿಸಲಾಗುತ್ತಿದೆ; ದರವನ್ನು ಎಷ್ಟು ನಿಗದಿಪಡಿಸಲಾಗಿದೆ;

ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಡ್ ಲಿಮಿಟೆಡ್ ನಿಂದ ಪ್ರಸ್ತುತ ವರ್ಷದಲ್ಲಿ 2,250 ಕೆ.ಜಿ. ಶ್ರೀಗಂಧದ ಎಣ್ಣೆಯನ್ನು ಇ-ಟೆಂಡರ್ ಮುಖಾಂತರ ಖರೀದಿಸಲಾಗಿದೆ. ದರದ ವಿವರವು ಈ ಕೆಳಗೆ ನಮೂದಿಸಿದೆ.

1. 1250 ಕೆ.ಜಿ. ಶ್ರೀಗಂಧ ಎಣ್ಣೆಯ ಮೂಲ ದರ 1 ಕೆ.ಜಿ. ಗೆ ರೂ.2,49,899 + 18% ಜಿಎಸ್‌ಟಿ.
2. 1000 ಕೆ.ಜಿ. ಶ್ರೀಗಂಧ ಎಣ್ಣೆಯ ಮೂಲ ದರ 1 ಕೆ.ಜಿ. ಗೆ ರೂ.2,49,755 + 18% ಜಿಎಸ್‌ಟಿ.

**ಈ)** ಅಧಿಕವಾಗಿ ಉಳಿದಿರುವ ಶ್ರೀಗಂಧ ಮರಗಳನ್ನು ಮಾರಾಟ ಮಾಡಲು ಇಲಾಖೆ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು).

ಕಳೆದ ಮೂರು ವರ್ಷಗಳಲ್ಲಿ ಸರ್ಕಾರಿ ಶ್ರೀಗಂಧ ಕೋಠಿಗಳಲ್ಲಿ ಸ್ವೀಕೃತವಾದ ಶ್ರೀಗಂಧ ದಾಸ್ತಾನು ಮತ್ತು ಮಾರಾಟ ಮಾಡಿದ ವಿವರ ಈ ಕೆಳಕಂಡಂತಿದೆ.

| ಶ್ರೀಗಂಧ ಕೋಠಿಯ ಹೆಸರು | ಸ್ವೀಕೃತವಾದ ಶ್ರೀಗಂಧ ದಾಸ್ತಾನು (ಹಾರ್ಟ್ ವುಡ್ ಕೆ.ಜಿ.ಗಳಲ್ಲಿ) | ಮಾರಾಟ ಮಾಡಿದ ಶ್ರೀಗಂಧ (ಹಾರ್ಟ್ ವುಡ್ ಕೆ.ಜಿ.ಗಳಲ್ಲಿ) |
|---|---|---|
| **2018-19** | | |
| ಮೈಸೂರು | 56,309.540 | 10,410.520 |
| ಶಿವಮೊಗ್ಗ | 8,405.160 | 9,913.000 |
| ಧಾರವಾಡ | 712.25 | 23.75 |
| **2019-20** | | |
| ಮೈಸೂರು | 49,311.740 | 73,387.550 |
| ಶಿವಮೊಗ್ಗ | 6,649.594 | 1,252.250 |
| ಧಾರವಾಡ | 108.500 | 1,204.270 |
| **2020-21** | | |
| ಮೈಸೂರು | 21,604.710 | 5,740.149 |
| ಶಿವಮೊಗ್ಗ | 11,078.760 | 9,890.900 |
| ಧಾರವಾಡ | 99.000 | 9.500 |

ಮೈಸೂರು, ಶಿವಮೊಗ್ಗ ಮತ್ತು ಧಾರವಾಡ ಸರ್ಕಾರಿ ಶ್ರೀಗಂಧದ ಕೋಠಿಗಳಲ್ಲಿ ಲಭ್ಯವಿರುವ ವಿವಿಧ ವರ್ಗಗಳ ಶ್ರೀಗಂಧ ದಾಸ್ತಾನನ್ನು ಇ-ಹರಾಜು ಮೂಲಕ ಎಂ.ಎಸ್.ಟಿ.ಸಿ ಸಂಸ್ಥೆಯ ಇ-ಪೋರ್ಟಲ್‌ನಲ್ಲಿ ವಿಲೇಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಸಂಖ್ಯೆ: ಅಪಜೀ 08 ಎಫ್‌ಡಿಪಿ 2022

(ಉಮೇಶ್ ವಿ. ಕತ್ತಿ)
ಅರಣ್ಯ ಹಾಗೂ ಆಹಾರ, ನಾಗರೀಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು